

# ಗಾಜಿನಂಥ ಕಪ್ಪೆ!

ಇವು ಜೀವಂತ ಕಪ್ಪೆಗಳು. ಮೊದಲ ನೋಟಕ್ಕೆ ಇವು ಗಾಜಿನ ಕಪ್ಪೆಯಂತೆ ಕಾಣುತ್ತವೆ. ಇತ್ತೀಚೆಗೆ ಕಂಡು ಬಂದ ತೀರ ಅಪರೂಪದ ಕಪ್ಪೆಗಳಿವು. ಇವು ದಕ್ಷಿಣ ಅಮೆರಿಕ ದೇಶದ ಇಕ್ವೇಡರ್ ದೇಶದ ಅಮೆಜಾನ್ ನದಿಯ ಕೆಳಪ್ರದೇಶದಲ್ಲಿ ಪತ್ತೆಯಾಗಿವೆ. ಇವುಗಳ ಬೆನ್ನ ಮೇಲೆ ಕಪ್ಪು ಚುಕ್ಕೆಗಳಿವೆ. ಹಳದಿ ಹಾಗೂ ಹಸಿರು ಬಣ್ಣವನ್ನು ಕಲಾವಿದನೊಬ್ಬ ಈ ಕಪ್ಪೆಗಳ ಮೇಲೆ ಬೇಕಾಬಿಟ್ಟಿಯಾಗಿ ಬಳಿದಿರುವನೇನೋ ಎನಿಸುತ್ತದೆ.

ಈ ಗಾಜಿನ ಕಪ್ಪೆಯನ್ನು ಅಂಗಾತವಾಗಿ ಮಲಗಿಸಿ ಎದೆ ಭಾಗವನ್ನು ನೋಡಿದರೆ ಅದರ ಕೆಂಪು ಹೃದಯದ ಬಡಿತವನ್ನು ಸ್ಪಷ್ಟವಾಗಿ ನೋಡಬಹುದು. ಇದರ ಮೈಮೇಲಿರುವ ಚರ್ಮ ಅಷ್ಟು ಪಾರದರ್ಶಕವಾಗಿದೆ. ಈ ಅಪರೂಪದ ಕಪ್ಪೆಯ ಸಂತತಿ ಅಪಾಯದ ಅಂಚಿನಲ್ಲಿದೆ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. ಇದು ಅಪಾಯದ ಅಂಚಿಗೆ ಸರಿಯುತ್ತಿರುವುದಕ್ಕೆ, ಮನುಷ್ಯನ ಆಕ್ರಮಣಕಾರಿ ಅಭಿವೃದ್ಧಿ ಕಾರ್ಯಗಳೇ ಕಾರಣವಂತೆ.

ಗಾಜಿನಂಥ ಕಪ್ಪೆಗಳನ್ನು ನಿತ್ಯ ವಿಕ್ಷೀಸುತ್ತಿರುವ ವಿಜ್ಞಾನಿ ಸಂಶೋಧಕ ಜುಲಿಅನ್ ಗೇಸಾವಿನ್ ಹೇಳುತ್ತಾರೆ, ‘ನಾನು ಕಂಡ ಕಪ್ಪೆಗಳಲ್ಲೆಲ್ಲ ಈ ಕಪ್ಪೆಗಳೇ ಅತ್ಯಂತ ಸುಂದರ ಹಾಗೂ ಆಕರ್ಷಕ. ಬೇರೆ ಬಗೆಯ ಪಾರದರ್ಶಕ ಚರ್ಮ ಹೊಂದಿರುವ ಕಪ್ಪೆಗಳೂ ಇವೆ. ಆದರೆ ಆ ಕಪ್ಪೆಗಳಲ್ಲಿ ಈ ಕಪ್ಪೆಗಳಂತೆ ಹೃದಯವನ್ನು ಹಾಗೂ ಹೃದಯ ಬಡಿತವನ್ನು ನೋಡಲಾಗುವುದಿಲ್ಲ’ ಎನ್ನುತ್ತಾರೆ. ಈ ಹೊಸ ಕಪ್ಪೆಗಳನ್ನು ಹೆಲಿನೊಬೆಟ್ರಾಕಿಯಮ್ ಎಂದು ಗುರುತಿಸಲಾಗಿದೆ.

■ ಸುಭಾಸ ಯಾದವಾಡ

